ಅಂಶವಾರು ವಿವರಗಳು ಈ ಕೆಳಗಿನಂತಿವೆ.

1) ಪಂಪಿಂಗ್ ಮೆಷಿನರಿ	-	7,58,930,25
2) ಪ್ರಧಾನ ನೀರೆತ್ತುವ ಕೊಳವೆ	-	20,54,231.00
3) ವಿತರಣಾ ಸಿಸ್ಟಂ	-	22,33,122.54
4) ನೀರಿನ ಮೇಲು ತೊಟ್ಟಿ (ಒಹೆಚ್‌ಟಿ)	-	1,79,412.24
5) ಹ್ಯಾಬಿಟೇಟ್ ಡೆವಲಪ್‌ಮೆಂಟ್ ಮತ್ತು ಇತರೆ ಕಾಮಗಾರಿಗಳು	-	28,55,503.97
		ರೂ.1,00,81,200.00

ರಾಜ್ಯದಲ್ಲಿರುವ ಆರೋಗ್ಯ ಕೇಂದ್ರಗಳ ಸಂಖ್ಯೆ

2958 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಎಷ್ಟು ಆರೋಗ್ಯ ಕೇಂದ್ರಗಳು ಇವೆ? (ಪ್ರಾಥಮಿಕ ಆರೋಗ್ಯ ಕೇಂದ್ರ)? ಎಷ್ಟು ಕೇಂದ್ರಗಳು ಡಾಕ್ಟರ್ಸ್ ಮತ್ತು ಸಿಬ್ಬಂದಿಗಳ ಕೊರತೆ ಇದೆ? ಜಿಲ್ಲಾವಾರು ವಿವರ? ಎಷ್ಟು ಕೇಂದ್ರಗಳಿಗೆ ಕಟ್ಟಡಗಳ ಕೊರತೆ ಇವೆ? ಎಷ್ಟು ಕೇಂದ್ರಗಳಿಗೆ ಸಾಮಗ್ರಿಗಳ ಕೊರತೆ ಇದೆ?*

ಡಾ|| ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ 1676 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ, ಈ ಪೈಕಿ 186 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳಿದ್ದು, ಬಹುತೇಕ ಕೇಂದ್ರಗಳಲ್ಲಿ ಕೆಲವೊಂದು ಸಿಬ್ಬಂದಿಗಳ ಕೊರತೆ ಇದೆ. (ಪಟ್ಟಿ ಲಗತ್ತಿಸಿದೆ)

509 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕಟ್ಟಡಗಳು ಇರುವುದಿಲ್ಲ, ಕಟ್ಟಡಗಳು ಇಲ್ಲದೇ ಆರೋಗ್ಯ ಕೇಂದ್ರಗಳು ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.

ಸಾಮಗ್ರಿಗಳ ಕೊರತೆಯು ಆಗಿಂದಾಗ್ಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬದಲಾಗುವುದರಿಂದ ನಿಗಧಿತ ಸಂಖ್ಯೆಯನ್ನು ಒದಗಿಸಲು ಸಾಧ್ಯವಾಗುವುದಿಲ್ಲ.

ಅನುಬಂಧ - 1

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ವೈದ್ಯರನ್ನು ಭರ್ತಿ ಮಾಡಬೇಕಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು: ಪ್ರಾಥಮಿಕ ಆರೋಗ್ಯ ಘಟಕಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಒಟ್ಟು ಪ್ರಾಥಮಿಕ ಆರೋಗ್ಯ ಕೇಂದ್ರ:ಪ್ರಾಥಮಿಕ ಆರೋಗ್ಯ ಘಟಕ
1.	ಬೆಂಗಳೂರು (ನಗರ)	-
2.	ಬೆಂಗಳೂರು (ಗ್ರಾಮಾಂತರ)	3
3.	ಚಿತ್ರದುರ್ಗ	5
4.	ದಾವಣಗೆರೆ	4
5.	ಕೋಲಾರ	7
6.	ಶಿವಮೊಗ್ಗ	10
7.	ತುಮಕೂರು	7
8.	ಮೈಸೂರು	9
9.	ಚಾಮರಾಜನಗರ	5
10.	ಮಂಡ್ಯ	4
11.	ಮಡಿಕೇರಿ	12
12.	ಹಾಸನ	23
13.	ಚಿಕ್ಕಮಗಳೂರು	4
14.	ಮಂಗಳೂರು	10
15.	ಉಡುಪಿ	3
16.	ಬೆಳಗಾಂ	6
17.	ಧಾರವಾಡ	2
18.	ಹಾವೇರಿ	6
19.	ಗದಗ್	6
20.	ಬಾಗಲಕೋಟೆ	5
21.	ಬಿಜಾಪುರ	8

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಒಟ್ಟು ಪ್ರಾಥಮಿಕ ಆರೋಗ್ಯ ಕೇಂದ್ರ:ಪ್ರಾಥಮಿಕ ಆರೋಗ್ಯ ಘಟಕ
22.	ಕಾರವಾರ	2
23.	ಗುಲ್ಬರ್ಗಾ	22
24.	ಬೀದರ್	7
25.	ಬಳ್ಳಾರಿ	4
26.	ರಾಯಚೂರು	4
27.	ಕೊಪ್ಪಳ	6
	ಒಟ್ಟು	**186**

ANNEXURE - II

District wise Primary Health Centres without buildings

Sl. No.	District	Without Buildings
1.	Bangalore (U)	-
2.	Bangalore (R)	31
3.	Chitradurga	20
4.	Davanagere	30
5.	Kolar	15
6.	Shimoga	26
7.	Tumkur	23
8.	Belgaum	31
9.	Bijapur	16
10.	Bagalkot	10
11.	Dharwar	4
12.	Gadag	10
13.	Haveri	17

Sl. No.	District	Without Buildings
14.	Uttara Kannada	10
15.	Gulbarga	59
16.	Bellary	13
17.	Bidar	3
18.	Raichur	9
19.	Koppal	13
20.	Mysore	61
21.	Chamarajnagar	-
22.	Chikkamagalur	22
23.	D.Kannada	6
24.	Hassan	33
25.	Kodagu	-
26.	Mandya	18
27.	Udupi	23
	Total	**509**

ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ಅಭಿವೃದ್ಧಿ

2964 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲಾ ಪಂಚಾಯಿತಿಗಳು ಅಭಿವೃದ್ಧಿ ಬಗ್ಗೆ ಯಾವ ಸ್ಥಾನದಲ್ಲಿವೆ?

ಆ) ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಪ್ರಗತಿಯಲ್ಲಿ ಯಾವ ಸ್ಥಾನದಲ್ಲಿದೆ?

ಇ) ಇನ್ನೂ ಉತ್ತಮ ರೀತಿಯಲ್ಲಿ ತಾಲ್ಲೂಕುವಾರು ಪ್ರಗತಿ ಹೊಂದಲು ಸರ್ಕಾರ ಕೈಗೊಂಡಿರುವ ಕ್ರಮವೇನು?